**<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**<u>ಸಿ.ಸಿ. ಸಂಖ್ಯೆ: 72/2019</u>**

ಸಾಕ್ಷಿಯನ್ನು ದಿ:**11.06.2026** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

| | | | |
|---|---|---|---|
| ಹೆಸರು | ಚೇತನ್ ಕುಮಾರ ಎಂ | ಸಿಡಬ್ಲ್ಯೂ:10 | ಪಿಡಬ್ಲ್ಯೂ:12 |
| ತಂದೆಯ ಹೆಸರು | ಲೇಟ್ ಮಲ್ಲಿಕಾರ್ಜುನ | | |
| ವಯಸ್ಸು | 43 ವರ್ಷ | | |
| ಕೆಲಸ | ಸಿ ಹೆಚ್ ಸಿ ಮುಖ್ಯಪೇದೆ 180, ಹುಣಸೂರು ಪಟ್ಟಣ ಪೊಲೀಸ್ ಠಾಣೆ | | |
| ವಾಸಸ್ಥಳ | ಹುಣಸೂರು | | |

**<u>ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ:</u>**

ನಾನು ಈ ಮೊದಲು 2014 ರಿಂದ 2019 ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದು, 2024 ರಿಂದ ಇಲ್ಲಿವರೆಗೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01.06.2018 ರಂದು ನನ್ನನ್ನು ಮತ್ತು ಚಾಸಾ-12 ರವರನ್ನು ವಿಶೇಷ ಕರ್ತವ್ಯಕ್ಕೆಂದು ನೇಮಿಸಿದ್ದು, ಕಲ್ಕುಣಿಕೆ, ಬೇಕರಿ ಸರ್ಕಲ್, ಹಳೆ ಸೇತುವೆ ಕಡೆ ಗಸ್ತು ಮಾಡುತ್ತಿದ್ದಾಗ ಬೆಳಗಿನಜಾವ 3.00 ಗಂಟೆ ಸಮಯದಲ್ಲಿ ಚಾಸಾ-16 ರವರ ಜೊತೆಯಲ್ಲಿ ಗಸ್ತಿನಲ್ಲಿದ್ದಾಗ ಚಾಸಾ-14, 11, ಪಿಸಿ-498 ಕಿರಣ್ ರವರು ಹಳೆ ಪೋಸ್ಟ್ ಆಫೀಸು ರಸ್ತೆಯಲ್ಲಿ ಗಸ್ತುವಿನಲ್ಲಿದ್ದಾಗ ಚಾಸಾ-12 ರವರಿಗೆ ದೂರವಾಣಿ ಕರೆ ಮಾಡಿ

ಮೂವರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಬೈಕಿನಲ್ಲಿ ಹೋಗುತ್ತಿದ್ದು ಸದರಿಯವರು ಪಿರಿಯಾಪಟ್ಟಣದ ಹಳೆ ಸೇತುವೆ ರಸ್ತೆ ಕಡೆ ಬರುತ್ತಿದ್ದಾರೆ, ನೀವು ಅಲ್ಲಿಗೆ ಬನ್ನಿ ಎಂದು ತಿಳಿಸಿದ ಮೇರೆಗೆ ನಾವು ಅಲ್ಲಿಗೆ ಹೋಗಿದ್ದು ರವಿಸಾಲೆ ಮನೆಯ ಅಂಚಿನ ಮನೆಯ ಬಳಿ ಸುತ್ತುವರಿದು ಮೂವರು ವ್ಯಕ್ತಿಗಳನ್ನು ಹಿಡಿದುಕೊಂಡು ವಿಚಾರಿಸಿದೆವು. ಅವರಲ್ಲಿ ಒಬ್ಬನ ಬಲಗೈ ಹೆಬ್ಬೆರಳ ಹತ್ತಿರ ರನ್ನ ಎಂಬ ಹಸಿರು ಹಚ್ಚೆ ಇತ್ತು. ಈ ಹಿಂದೆ ದಾಖಲಾದ 296/2018 ರ ಪ್ರಕರಣದಲ್ಲಿ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ವ್ಯಕ್ತಿ ಈತನೆ ಎಂದು ಚಾಸಾ-12 ರವರಿಗೆ ತಿಳಿಸಿದ್ದೆವು. ಸದರಿಯವರ ಬೈಕನ್ನು ಪರಿಶೀಲಿಸಲಾಗಿ ಅದು ಬಿಳಿ ಬಣ್ಣ ಆಗಿದ್ದು, ಸದರಿ ಬೈಕಿನ ನಂಬರ್ ಪ್ಲೇಟ್ ನಲ್ಲಿ ನಂಬರನ್ನು ತೆಗೆದು ಬೇರೆ ನಂಬರನ್ನು ಹಾಕಿದ್ದು ಈ ಹಿಂದೆ ಮ್ಯಾಜಿಸ್ಟೇಟ್ ಮನೆಯ ಬೈಕ್ ಕಳ್ಳತನವಾಗಿದ್ದು, ಅದು ಇದೆ ಬೈಕ್ ಎಂದು ಆರೋಪಿಗಳು ಒಪ್ಪಿಕೊಂಡಿದ್ದು, ಸದರಿ ಮೂವರು ಆರೋಪಿಗಳನ್ನು ದಸ್ತಗಿರಿ ಮಾಡಿ ಬೆಳಗಿನಜಾವ 3.30 ಕ್ಕೆ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಲಾಗಿ 1 ನೇ ಆರೋಪಿ ಕಿರಣ, 2 ನೇ ಆರೋಪಿ ಸಂದೀಪ, 3 ನೇ ಆರೋಪಿ ವಿನೋದ ಎಂದು ತಿಳಿಸಿದರು.

ಈ ಹಿಂದೆ ಸರ್ಕಾರಿ ನೌಕರ ಕಟ್ಟಡದಲ್ಲಿ ಒಬ್ಬ ಭಿಕ್ಷುಕನನ್ನು ಹಣದ ವಿಚಾರವಾಗಿ ಗಲಾಟೆ ಮಾಡಿ ಆ ವ್ಯಕ್ತಿಯನ್ನು ಕೊಲೆ ಮಾಡಿರುವುದಾಗಿ ಮೂವರು ತಿಳಿಸಿದ್ದು, ಸದರಿ ಆರೋಪಿಗಳಿಂದ ಚಿನ್ನ, ವಡವೆ, 2 ಬೈಕು, 1 ಲ್ಯಾಪ್ ಟಾಪ್ ಗಳನ್ನು ವಶಪಡಿಸಿಕೊಂಡಿರುತ್ತೇವೆ. ಹಾಗೂ ಕಬ್ಬಿಣದ ರಾಡನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿಯವರನ್ನು ನೋಡಿದರೆ ಗುರುತಿಸುತ್ತೇನೆ. ಹಾಗೆ ವಶಪಡಿಸಿಕೊಂಡ ವಸ್ತುಗಳನ್ನು ಈಗಾಗಲೇ ಇನ್ನೊಂದು ಪ್ರಕರಣ ಸಿಸಿ ನಂ.752/2018 ರಲ್ಲಿ ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ 3 ಮತ್ತು 4 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂಧ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಆರ್ ಎಸ್ ಬಿ ವಕೀಲರಿಂದಃ</u>**

ಆ ದಿನ ನಾವು ಗಸ್ತು ಮಾಡಿದ ದಿನಾಂಕ ದಿ.01.06.2018 ಮತ್ತು 02.06.2018 ರ ಮಧ್ಯವೆ ಎಂದರೆ ಸಾಕ್ಷಿ ದಿ.01.06.2018 ರ ಮಧ್ಯರಾತ್ರಿ ಎಂದು ಹೇಳುತ್ತಾರೆ. ರಾತ್ರಿ 11.00 ಗಂಟೆಗೆ ಗಸ್ತಿಗೆ ಹೊರಟಿರುತ್ತೇನೆ. ಠಾಣೆಯಿಂದ ಹೊರಡುವಾಗ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಎಎಸ್ ಐ ರವರಿಗೆ ಗೊತ್ತಿರುತ್ತದೆ ಎಂದು ನುಡಿದು ನಂತರ ನಮೂದು ಮಾಡಿ ಹೋಗಿರುತ್ತೇವೆ ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ನೋಡಿ ವಿನೋದ ಎಂದು ಗುರುತಿಸಿರುತ್ತಾರೆ. ರವಿಸಾಲೆ ಅಂಚಿನ ಮನೆ ಎಂಬ ಸ್ಥಳದ ಚೆಕ್ಕುಬಂದಿ ಹೇಳಲಾಗುತ್ತದೆಯೆ ಎಂದರೆ ಸಾಕ್ಷಿ ಕಟ್ಟಲಾದ ಕಾರಣ ಚೆಕ್ಕುಬಂದಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ರನ್ನ ಎಂಬ ಅಚ್ಚೆ ಇರುವಂತಹ ವ್ಯಕ್ತಿಯ ಹೆಸರು ಕಿರಣ. ಆಕ್ಟೀವಾ ಹೊಂಡಾದ ನಂಬರನ್ನು ಸ್ಕ್ರಾಚಸ್ ಮಾಡಿ ಹೊಸ ನಂಬರ್ ಹಾಕಿರುತ್ತಾರೆ ಎಂದು ಹೇಳಿದ್ದು, ಮೊದಲು ಸ್ಕೂಟರಿಗೆ ಯಾವ ನಂಬರ್ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಯಾವ ಪ್ರಕರಣದಲ್ಲಿ ಕೊಲೆ ಮಾಡಿದ್ದಾರೆ ಎಂದರೆ ಯುಡಿಆರ್ ಆಗಿರುತ್ತದೆ, ಆದರೆ ಅದು ಯಾವ ಪ್ರಕರಣ ಎಂದು ನನಗೆ ಗೊತ್ತಿಲ್ಲ. ಆರೋಪಿತರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು, ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.